ಒಬ್ಬ ಕಾವಲುಗಾರನ ಅಗತ್ಯವಿದೆ. ಅಪ್ಪನಲ್ಲಿ ಹೇಳಿದರೋ...ಹೇಳಲು ಸಂಕೋಚವೆನಿಸಿತು, ಅಪ್ಪ ಮತ್ತು ಅಮ್ಮ ಪರಸ್ಪರ ಜಗಳ ಕಾಯಲಾರಂಭಿಸಿದ್ದರು. ಮೊದಲ ದಿನ ರಾತ್ರಿ ಅಮ್ಮ ಅಳುತ್ತಾ ಹೇಳಿದ್ದು: ಮಗ ಅಪ್ಪನಂತಾಗಬಾರದು, ನನಗೆ ನೀನೇ ಇರೋದು. ಅಮ್ಮನ ಸ್ವರ ತಗ್ಗಿತು.

ನನ್ನ ಮಗು, ನೀನು ದೊಡ್ಡವನಾಗಬೇಕು. ದೊಡ್ಡ ಜನ ಆಗಬೇಕು. ನಿನಗೆ ನನ್ನಲ್ಲಿ ಪ್ರೀತಿ ಇಲ್ಲವೇ?

ಹಿಂದೆ ಅಪ್ಪ ಹೆಚ್ಚಾಗಿ ಮಾತನಾಡುತ್ತಿದ್ದಿರಲಿಲ್ಲ. ಬೆಳಿಗ್ಗೆ ಕಂಪನಿಗೆ ಹೋದರೆ ರಾತ್ರಿ ತುಂಬಾ ತಡವಾಗಿಯೇ ಮನೆ ಸೇರುತ್ತಿದ್ದುದು. ಮಗನಿಗೆ ನಿದ್ದೆ ಬರಲಾರಂಭಿಸುವಾಗ ಮುಂಬಾಗಿಲಿನಲ್ಲಿ ಕಾರು ಬಂದು ನಿಲ್ಲುವುದಿತ್ತು. ಕಬ್ಬಿಣದ ಬಾಗಿಲಿನ ಚಕ್ರಗಳು ಕಿರುಗುಟ್ಟುತ್ತ ಉರುಳುವ ಶಬ್ದ ಕೇಳಿದಾಗ ನಿದ್ದೆ ಹತ್ತಿದರೂ ಕೂಡಲೇ ಎಚ್ಚರವಾಗುತ್ತಿತ್ತು. ಆ ಬಾಗಿಲು ಬದಲಾಯಿಸಬೇಕು. ಹುರಿ ಹಗ್ಗದ ಹಾಸಿಗೆ, ಬೂಟ್ಸ್ ಒರೆಸುವ ಶಬ್ದವನ್ನು ಕದ್ದು ಮುಚ್ಚಿ ಕೇಳಬಹುದಿತ್ತು. ಏಣಿ ಮೆಟ್ಟಲುಗಳನ್ನು ಹತ್ತಿ ಮೊದಲ ಮಹಡಿವರೆಗೆ ತಲುಪುವವರೆಗೂ ಕೇಳಿಸಿಕೊಳ್ಳುತ್ತ ಮಲಗಬಹುದು. ಮಹಡಿಯ ಮೇಲಿನ ಕೋಣೆಯಲ್ಲಿ ಅಪ್ಪ ಬಾಗಿಲು ತೆರೆಯುವಾಗ ಸಂಕಲೆಯ ಕೊಂಡಿಗಳು ಕಿರುಗುಡುತ್ತಿದ್ದುವು. ಅಮ್ಮ ಕಾಯುವುದೆಂದಿಲ್ಲ. ಅಮ್ಮ ಮತ್ತೊಂದು ತುದಿಯಲ್ಲಿರುವ ಕೋಣೆಯಲ್ಲಿ ಮಲಗುವುದು. ಬೇಗ ತಲುಪಿದ ದಿನಗಳಲ್ಲಿ ಇಳಿಸಿದ ಛಾವಣಿ ಮನೆಯ ಇಲೆಕ್ಟ್ರಿಕ್ ಬೆಲ್ ಶಬ್ದ ಮಾಡುತ್ತಿತ್ತು. ಆಗ ಕೆಂಪು ಚೌಕಳಿ ಲುಂಗಿ ಉಟ್ಟಿರುವ ಪರಿಚಾರಕ ಓಡಿ ಹೋಗುವುದನ್ನು ಕಾಣಬಹುದಿತ್ತು. ಹಿಂತಿರುಗಿ ಬಂದು ಸೋಡಾ ಬಾಟ್ಲಿಗಳನ್ನು ಗ್ಲಾಸುಗಳನ್ನು ಎದೆಗಾನಿಸಿ ಹಿಡಿದುಕೊಂಡು ಮತ್ತೆ ಓಡುವುದನ್ನು ಕಾಣಬಹುದು.

ಬಾಬು, ನೀನು ನಿದ್ರಿಸಲಿಲ್ಲವೇ?

ಪರಿಚಾರಕ ಕರೆಯಲು ಬರುತ್ತಾನೆ. ಹುಕ್ಕಾ ಮತ್ತು ಮದ್ಯದ ಗಂಧ ಕೋಣೆಯಲ್ಲಿ ಹರಡಿರುತ್ತಿತ್ತು. ಮಗನಿಗೆ ಉಸಿರುಗಟ್ಟಿದಂತೆ ಅನ್ನಿಸುತ್ತಿತ್ತು. ಕೆಂಪಗಾಗಿರುವ ಮುಖವನ್ನು ನೋಡಿದರೆ ಹಗಲಿನಲ್ಲಿ ಕಾಣುತ್ತಿದ್ದ ಗಾಂಭೀರ್ಯವಿಲ್ಲ. ದಣಿದ ಅಸಹಾಯಕತೆ. ಬೆವರುತ್ತಿರುವ ಹಣೆಯೊರೆಸಿಕೊಂಡು, ಕಣ್ಣು ಅರ್ಧ ಮುಚ್ಚಿಕೊಂಡು ಒರಗಿ ಕುಳಿತುಕೊಂಡಿರುತ್ತಿದ್ದರು.

ಮಗು, ನೀನು ನಿದ್ದೆ ಮಾಡಲಿಲ್ಲವೇ?

ಇಲ್ಲ.

ಊಟ ಮಾಡಲಿಲ್ಲವೇ?

ಆಯಿತು.

ಕೆಲವೊಮ್ಮೆ ತಲೆ ಮುಟ್ಟಿ ನೇವರಿಸುವುದಿತ್ತು.

ಹೋಗಿ ನಿದ್ದೆ ಮಾಡು ಬೆಳಿಗ್ಗೆ ಬೇಗನೇ ಏಳಬೇಕು, ಓದಬೇಕು, ಒಳ್ಳೆಯ ಹುಡುಗನಾಗಬೇಕು.

ಮಗನಿಗೆ ಪೂರ್ತಿ ಅರ್ಥವಾಗಲಾರದು.

ಅಪ್ಪ ಮತ್ತೆ ಹೇಳುತ್ತಿದ್ದರು.

ನೀನು ಮಾತ್ರವೇ ನನಗಿರುವುದು. ನಿನ್ನ ಅಮ್ಮ ನನ್ನಲ್ಲಿ ಹುಚ್ಚು ಮಾತನಾಡುತ್ತಾಳೆ. ನಿನ್ನಲ್ಲಿಯೂ ಮಾತನಾಡಬಹುದು. ನೀನು ಅದೊಂದನ್ನೂ ಹೇಳಿಸಿಕೊಳ್ಳಕೂಡದು.

ಮಗ ದೊಡ್ಡವನಾದಾಗ ಆ ದೃಶ್ಯ ಇನ್ನಷ್ಟು ದೀರ್ಘವಾಯಿತು.

ಓದುತ್ತಿದ್ದೀಯಾ?

ಹೌದು.

ಹೆಚ್ಚು ನಿದ್ದೆಬಿಟ್ಟು ಓದಬಾರದು, ಆರೋಗ್ಯ ನೋಡಿಕೊಳ್ಳಬೇಕು. ನನಗೆ ನೀನು ಮಾತ್ರವೇ ಇರುವುದು.

ಮಗ ಮಾತನಾಡದೆ ನಿಂತ.

ಬಾಬು, ನೀನು ಕೇಳಿಸಿಕೊಳ್ಳುತ್ತಿದ್ದಿಯಾ?

ಹೌದು. ಆದರೆ ಏನೂ ಹೇಳುವುದೆಂದಿಲ್ಲ.

ನೀನು ದೊಡ್ಡ ವ್ಯಕ್ತಿಯೊಬ್ಬನ ಮಗ, ಅದನ್ನು ನೆನಪಿಸಿದ್ದು. ನಿನ್ನ ಅಮ್ಮ ಏನು ಹೇಳಿದರೂ ನೆನಪಿಟ್ಟುಕೋ, ನಿನಗೆ ನಾನಿದ್ದೇನೆ, ಅಮ್ಮನಿಗೆ ಹುಚ್ಚು.

ಮಗ ಪ್ರತಿನಿತ್ಯವೂ ಕೇಳಿಸಿಕೊಳ್ಳುತ್ತಿದ್ದುದರಿಂದ ಗಮನಿಸದೆಯೂ ಗಮನಿಸಿದ ರೀತಿಯಲ್ಲಿ ನಿಂತ.

ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಆ ಭಾರ ನನ್ನ ಹೆಗಲಲ್ಲಿ ಹೊರಿಸಿದರು. ಅದರಿಂದಾಗಿ ನಾನು ನಾಶವಾದುದು. ನಿನ್ನ ಅಮ್ಮನಿಗೆ ಇನ್ನೂ ನನ್ನನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. ನಿನ್ನನ್ನು ನೆನೆದು ನಾನು ಕ್ಷಮಿಸಿದೆ; ಕ್ಷಮಿಸಿದ ಬಾಬು. ಕೇಳಿಸಿಕೊಳ್ಳುತ್ತಿದ್ದಿಯಾ?

ಅಪ್ಪ ಕಣ್ಣು ಪೂರ್ತಿ ಮುಚ್ಚಿ ಒರಗಿ ಕುಳಿತು ನಿದ್ರಿಸುವರು. ನಿಮಿಷಗಳ ಬಳಿಕ ಕಣ್ಣು ನಿಧಾನವಾಗಿ ತೆರೆಯುವಾಗ ಕೂಡಲೇ ನೆನಪಿಸಿಕೊಂಡು ಹೇಳುವರು: ಮಗೂ ನೀನು ಹೋಗಿ ಮಲಗಿಕೋ. ಎಡ ಜಗಲಿಯಿಂದ